# ಕರ್ನಾಟಕದಲ್ಲಿ ರಾಮಕೃಷ್ಣ–ವಿವೇಕಾನಂದ ಆಶ್ರಮಗಳು

ಸ್ವಾಮಿ ಪ್ರಕಾಶಾನಂದ

ಕರ್ನಾಟಕದಲ್ಲಿ ದಿವ್ಯತ್ರಯರ ಭಾರಧಾರೆಯನ್ನು ಹರಡುವ ಉದ್ದೇಶದಿಂದ ಆರಂಭಗೊಂಡ ಅನೇಕ ಸಂಘ ಸಂಸ್ಥೆಗಳಲ್ಲಿ ಪ್ರಮುಖವಾದವುಗಳೇ 'ರಾಮಕೃಷ್ಣ–ವಿವೇಕಾನಂದ ಆಶ್ರಮ'ಗಳು. ರಾಮಕೃಷ್ಣ ಭಾವಪ್ರಚಾರ ಪರಿಷತ್ತಿನ ಪ್ರಧಾನ ಅಂಗಗಳಾದ ಈ ಆಶ್ರಮಗಳ ಪರಿಚಯ ಮಾಡಿಕೊಟ್ಟಿರುವ ಲೇಖಕರು ರಾಣೆಬೆನ್ನೂರು ರಾಮಕೃಷ್ಣ ವಿವೇಕಾನಂದ ಆಶ್ರಮದ ಮುಖ್ಯಸ್ಥರಾಗಿದ್ದಾರೆ. ಅವರು ಉತ್ತಮ ಗಾಯಕರೂ, ಭಾಷಣಗಾರರೂ, ಸಂಘಟಕರೂ ಆಗಿದ್ದಾರೆ.




ರಾಮಕೃಷ್ಣ ವಿವೇಕಾನಂದ ಆಶ್ರಮ, ತುಮಕೂರು

ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿ ಮತ್ತು ಸ್ವಾಮಿ ವಿವೇಕಾನಂದರ ಸಂದೇಶಗಳು ಸಾರ್ವತ್ರಿಕವಾಗಿವೆ, ಸಾಧ್ಯತೆಗಳಿಂದ ಪರಿಪೂರಿತವಾಗಿವೆ. ಮಾನವ ಜನಾಂಗಕ್ಕೆ ತುಂಬಾ ಉಪಯುಕ್ತವಾಗಿವೆ. ಆದ್ದರಿಂದ ಇವುಗಳನ್ನು ಯಾವುದೇ ಒಂದು ವಾಹಿನಿಗೆ, ಸಂಪ್ರದಾಯಕ್ಕೆ ಅಥವಾ ಸಂಸ್ಥೆಗೆ ಸೀಮಿತಗೊಳಿಸಲು ಸಾಧ್ಯವಿಲ್ಲ. ವಾಸ್ತವದಲ್ಲಿ ಇದು ಈ ಎಲ್ಲಾ ಮಿತಿಗಳನ್ನು ಮೀರಿದ ಜಾಗತಿಕ ಚಳುವಳಿಯಾಗಿದೆ ಅಥವಾ ಆಧುನಿಕ ಇತಿಹಾಸದಲ್ಲಿ ಒಂದು ಬೃಹತ್ ಪ್ರವೃತ್ತಿಯಾಗಿದೆ ಎಂದು ಖ್ಯಾತ ಅಮೇರಿಕಾದ ಇತಿಹಾಸ ಪ್ರಾಧ್ಯಾಪಕ ಕಾರ್ಲ್ ಟಿ. ಜ್ಯಾಕ್‌ಸನ್‌ರವರು ಅಭಿಪ್ರಾಯಪಟ್ಟಿದ್ದಾರೆ.

ನಿಜ, ಶ್ರೀ ರಾಮಕೃಷ್ಣ ಪರಂಪರೆಯು ಜಾಗತಿಕ ಮಟ್ಟದ ಮಾನ್ಯತೆಯನ್ನು ಪಡೆದಿದ್ದು ಜಾತಿ, ಮತ, ಪಂಥ, ಜನಾಂಗ ಇವೇ ಮೊದಲಾದ ಕಟ್ಟುಪಾಡುಗಳನ್ನು ಮೀರಿ ವಿಶ್ವವ್ಯಾಪಕವಾಗಿದೆ. ಕೊಲ್ಕತ್ತಾದಲ್ಲಿರುವ ಬೇಲೂರು ಮಠವನ್ನು ಕೇಂದ್ರವನ್ನಾಗಿ ಹೊಂದಿರುವ ನೂರಾರು ಶಾಖೆಗಳು ಇಂದು ದೇಶ–ವಿದೇಶಗಳಲ್ಲಿ ಕಾರ್ಯೋನ್ಮುಖವಾಗಿವೆ.

ಇವುಗಳೊಂದಿಗೆ ದಿವ್ಯತ್ರಯರ ವಿಚಾರಧಾರೆಗಳಿಂದ, ರಾಮಕೃಷ್ಣ ಮಠ ಮತ್ತು ಮಿಷನ್ನಿನ ಶ್ರೇಷ್ಠ ಸಂನ್ಯಾಸಿಗಳಿಂದ ಪ್ರಭಾವಿತರಾದ ಹಲವು ಯುವಕರು ದೇಶದ ವಿವಿಧ ಭಾಗಗಳಲ್ಲಿ ಸರ್ವಸಂಗ ಪರಿತ್ಯಾಗ ಮಾಡಿ, **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ಎಂಬ ಮೂಲಮಂತ್ರವನ್ನು ತಮ್ಮ ಜೀವನದ ಚರಮಗುರಿಯನ್ನಾಗಿಸಿಕೊಂಡು ಸ್ವತಂತ್ರ ಆಶ್ರಮಗಳನ್ನು ಸ್ಥಾಪಿಸಿ ಆಧ್ಯಾತ್ಮಿಕ, ಶೈಕ್ಷಣಿಕ, ಸಾಮಾಜಿಕ ಸೇವೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇನ್ನು ಹಲವು ಗೃಹೀ ಭಕ್ತರು ದಿವ್ಯತ್ರಯರ ಹೆಸರಿನಲ್ಲಿ ಅಧ್ಯಯನ ಕೇಂದ್ರಗಳನ್ನು, ಆಧ್ಯಾತ್ಮಿಕ ಸೇವಾ ಸಂಸ್ಥೆಗಳನ್ನು ತೆರೆದು ಆತ್ಮೋದ್ಧಾರಕ್ಕೆ ಪೂರಕವಾದ ವಿವಿಧ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಬೇಲೂರು ಮಠ ಹಾಗೂ ಮೇಲೆ ಉಲ್ಲೇಖಿತವಾದ ಸ್ವತಂತ್ರ ಆಶ್ರಮಗಳು, ಸಂಘ–ಸಂಸ್ಥೆಗಳನ್ನು ಒಂದು ಸೂತ್ರದಲ್ಲಿ ಬೆಸೆದು ಇನ್ನೂ ಹೆಚ್ಚು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಬೇಲೂರು ಮಠದ ಹಿರಿಯ ಸಂನ್ಯಾಸಿಗಳ ಮಾರ್ಗದರ್ಶನದಲ್ಲಿ ೧೯೮೦ರಲ್ಲಿ 'ಭಾವ ಪ್ರಚಾರ ಸಮಿತಿ'ಯನ್ನು ರಚಿಸಲಾಯಿತು. ಇದು ರಾಮಕೃಷ್ಣ ಮಠ ಮತ್ತು ಮಿಷನ್ ಇದರ ೧೧ನೇ ಅಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ವೀರೇಶ್ವರಾನಂದಜಿ ಮಹಾರಾಜರವರ ಪರಿಕಲ್ಪನೆ. ಅದರ ಮಾರ್ಗದರ್ಶನದಲ್ಲಿ ರಾಜ್ಯವಾರು ಭಾವಪ್ರಚಾರ ಪರಿಷತ್ತುಗಳನ್ನು ಸ್ಥಾಪಿಸಲಾಯಿತು.

ಶರಣರ, ದಾಸರ ವಿಚಾರಧಾರೆಗಳಿಂದ ಪುನೀತಗೊಂಡ, ಕಲೆ, ಸಾಹಿತ್ಯ, ಸಂಗೀತ ಸಂಸ್ಕೃತಿಯಿಂದ ಸಮೃದ್ಧವಾದ ನಾಡಾದ ಕರ್ನಾಟಕದ ಮೂಲೆಮೂಲೆಗೂ ದಿವ್ಯತ್ರಯರ, ಸನಾತನ ಭಾರ





ರಾಮಕೃಷ್ಣ ವಿವೇಕಾನಂದ ಆಶ್ರಮ, ಧಾರವಾಡ

ತದ ಮೌಲ್ಯಾದರ್ಶಗಳನ್ನು ತಲುಪಿಸಲು ಶ್ರೀರಾಮಕೃಷ್ಣರು, ಶ್ರೀಮಾತೆ ಶಾರದಾದೇವಿ ಹಾಗೂ ಸ್ವಾಮಿ ವಿವೇಕಾನಂದರ ಹೆಸರಿನಲ್ಲಿ ಸ್ಥಾಪಿತವಾದ ಆಶ್ರಮಗಳು ಹಾಗೂ ಸಂಘ-ಸಂಸ್ಥೆಗಳ ಸದಸ್ಯತ್ವವನ್ನು ಹೊಂದಿರುವ 'ರಾಮಕೃಷ್ಣ-ವಿವೇಕಾನಂದ ಭಾವ ಪ್ರಚಾರ ಪರಿಷತ್, ಕರ್ನಾಟಕ' ೨೦೧೨ರಲ್ಲಿ ಸ್ಥಾಪಿತವಾಯಿತು. ಈ ಪರಿಷತ್ ಪ್ರಾರಂಭವಾಗುವ ಮೊದಲೇ ಈ ರಾಮಕೃಷ್ಣ-ವಿವೇಕಾನಂದ ಆಶ್ರಮಗಳು ಭರದಿಂದ ಕಾರ್ಯಮಗ್ನವಾಗಿದ್ದವು. ಇದರಲ್ಲಿ ಇನ್ನೊಂದು ಗಮನಿಸಬೇಕಾದ ವಿಷಯವೆಂದರೆ 'ಕರ್ನಾಟಕದಲ್ಲಿನ ಭಾವಾಂದೋಲನ'ದಲ್ಲಿ ಇರುವವರು ಹೆಚ್ಚಿನವರು ಸರ್ವಸಂಗ ಪರಿತ್ಯಾಗಿಗಳಾದ ಸಂನ್ಯಾಸಿಗಳು ಮತ್ತು ಸಂನ್ಯಾಸಿನಿಯರು ಎಂಬುದು. ರಾಮಕೃಷ್ಣ-ವಿವೇಕಾನಂದ ಆಶ್ರಮಗಳು, ಶಾರದಾಶ್ರಮಗಳು ಪ್ರಾರಂಭವಾದ ಹಿನ್ನೆಲೆ ತಿಳಿಯಲೇಬೇಕಾದ ಪ್ರಮುಖ ಅಂಶ.

೧೯೮೬-೮೭ರಲ್ಲಿ ರಾಮಕೃಷ್ಣ ಮಠದ ಹಿರಿಯ ಯತಿಗಳಲ್ಲೊಬ್ಬರಾಗಿದ್ದ ಪರಮಪೂಜ್ಯ ಶ್ರೀಮತ್ ಸ್ವಾಮಿ ಪುರುಷೋತ್ತಮಾನಂದಜಿ ಮಹಾರಾಜ್‌ರ ಅಮೃತ ಹಸ್ತದಿಂದ ಮೂಡಿಬಂದ ಒಂದು ಪುಟ್ಟ ಪುಸ್ತಕ 'ಕರ್ನಾಟಕದ ಯುವಜನತೆಗೊಂದು ಕರೆ'. ಈ ಪುಟ್ಟ ಪುಸ್ತಕವೇ ಕರ್ನಾಟಕದಲ್ಲಿನ ಇಂದಿನ ಕ್ರಾಂತಿಗೆ ಪ್ರೇರಣೆ.

ವಿವೇಕಾನಂದರ ಜೀವನ-ಸಂದೇಶಗಳನ್ನು ಅಧ್ಯಯನ ಮಾಡುವ ಬಗೆ, ಅರ್ಥೈಸಿಕೊಳ್ಳಲು ಬೆಳೆಸಿಕೊಳ್ಳಬೇಕಾದ ಸಾಮರ್ಥ್ಯ, ನಂತರ ಅದನ್ನು ಪ್ರಚಾರ ಮಾಡಲು, ಸಂದೇಶಗಳನ್ನು ಅನುಷ್ಠಾನಗೈಯಲು ಸಂಘದ ಆವಶ್ಯಕತೆ, ಸಂಘಟನೆಯಲ್ಲಿ ಕೆಲವು ದೋಷಗಳಿದ್ದರೂ ಅದರಲ್ಲಿ ಬಲವಿದೆ ಎಂಬ ತಥ್ಯವನ್ನು ಯುವಕರಿಗೆ ಮನದಟ್ಟು ಮಾಡಿಸಿ ಸಂಘಟಿತರಾಗಲು ಪೂಜ್ಯ ಸ್ವಾಮಿ ಪುರುಷೋತ್ತಮಾನಂದಜಿ ಆ ಪುಟ್ಟ ಪುಸ್ತಕದ ಮೂಲಕ ಕರೆ ನೀಡಿದರು. ಅವರ ಪ್ರೀತಿಯ ಕರೆಗೆ ಅಂದಿನ ಹಲವು ವಿದ್ಯಾವಂತ, ಪ್ರಜ್ಞಾವಂತ ಯುವಕರು, ಯುವತಿಯರು ಸ್ಪಂದಿಸಿದರು. ತತ್ ಪರಿಣಾಮವಾಗಿ ೧೯೮೯ರಲ್ಲಿ ಶ್ರೀ ಹೆಚ್.ಎನ್.ಶಿವಕುಮಾರ (ಇಂದಿನ ಪೂಜ್ಯ ಶ್ರೀ ಸ್ವಾಮಿ ನಿರ್ಭಯಾನಂದ ಸರಸ್ವತಿಯವರು) ಅವರ ಮೂಲಕ ಅಖಿಲ ಕರ್ನಾಟಕ ವಿವೇಕಾನಂದ ಯುವ ಮಹಾಮಂಡಲ, ತುಮಕೂರಿನಲ್ಲಿ 'ವಿವೇಕಾನಂದ ವಿಚಾರ ವೇದಿಕೆ', 'ವಿವೇಕಾನಂದ ಸೇವಾ ಕೇಂದ್ರ' ಹೀಗೆ ಇನ್ನೂ ಬೇರೆ ಬೇರೆ ಹೆಸರುಗಳಿಂದ ಹಲವಾರು ಸಂಘ-ಸಂಸ್ಥೆಗಳು ಪ್ರಾರಂಭವಾದವು. ಈ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸ್ವಯಂಸೇವಕರುಗಳಲ್ಲಿ ಕ್ರಮೇಣ ತ್ಯಾಗ-ವೈರಾಗ್ಯಗಳ ಜ್ವಾಲೆ ಹೊತ್ತಿಕೊಂಡಿತು. ವೀರ ವಿವೇಕಾನಂದರ ಧೀರ ಸಂದೇಶಗಳಂತೆ ತಾವೂ ಬದುಕಬೇಕು, ಆತ್ಮನ ಮೋಕ್ಷಕ್ಕಾಗಿ ಶ್ರಮಿಸುವುದರ ಜೊತೆಗೆ ಜಗತ್ತಿನ ಏಳ್ಗೆಗೂ ನಾವು ಶ್ರಮಿಸಬೇಕು ಎಂಬ ತುಡಿತ ತೀವ್ರವಾಯಿತು. ಈ ಬದಲಾವಣೆಯನ್ನು ಗುರುತಿಸಿದ ಸ್ವಾಮಿ ಪುರುಷೋತ್ತಮಾನಂದಜಿ 'ರಾಮಕೃಷ್ಣ ಮಿಷನ್'ನ ಶಾಖೆಗಳು ಇಲ್ಲದೇ ಇರುವ ಕರ್ನಾಟಕದ ಬೇರೆ ಬೇರೆ ಭಾಗಗಳಲ್ಲಿ ಈಗಾಗಲೇ ಪ್ರಾರಂಭವಾಗಿದ್ದು ಸಂಘ-ಸಂಸ್ಥೆಗಳನ್ನು 'ಆಶ್ರಮ'ಗಳನ್ನಾಗಿ ಪರಿವರ್ತಿಸಿಕೊಂಡು, 'ರಾಮಕೃಷ್ಣ ಮಿಷನ್' ಸೇರಲು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಸಂಕಲ್ಪಿಸಿದ್ದ ಹಲವು ಯುವಕರು ವಯೋಮಿತಿಯೇ ಮೊದಲಾದ ಕಾರಣಗಳಿಂದ ರಾಮಕೃಷ್ಣ ಮಿಷನ್ ಸೇರಲು ಸಾಧ್ಯವಾಗದೆ ಹೋದಾಗ, ಬೇರೆ ಕಡೆ ಸಂನ್ಯಾಸ ದೀಕ್ಷೆ ತೆಗೆದುಕೊಳ್ಳಲು ಸಲಹೆ ನೀಡಿ, ಮಾರ್ಗದರ್ಶನ ಮಾಡಿದರು. ದಿವ್ಯತ್ರಯರ ಸಂದೇಶಗಳ ಪ್ರಸಾರಕ್ಕಾಗಿ ಅನುಷ್ಠಾನ ನಿರತರಾಗಿದ್ದ ಈ ತ್ಯಾಗಿ ಯುವಕರೇ ಸಂನ್ಯಾಸಿಗಳಾದರು. ಅವರು ಕಾರ್ಯನಿರ್ವಹಿಸುತ್ತಿದ್ದ ಸಂಘ-ಸಂಸ್ಥೆಗಳೇ 'ರಾಮಕೃಷ್ಣ-ವಿವೇಕಾನಂದ' ಆಶ್ರಮಗಳಾಗಿ ಪದೋನ್ನತಗೊಂಡವು. ಪರಮಪೂಜ್ಯ ಸ್ವಾಮಿ ಹರ್ಷಾನಂದಜಿ ಮಹಾರಾಜ್, ಅಧ್ಯಕ್ಷರು, ರಾಮಕೃಷ್ಣ ಮಠ, ಬೆಂಗಳೂರು ಇವರೇ ಈ ಹೆಸರುಗಳನ್ನು ಸೂಚಿಸಿದರು. ಹೀಗೆ ಪ್ರಾರಂಭವಾಗಿದ್ದೇ ರಾಮಕೃಷ್ಣ-ವಿವೇಕಾನಂದ ಶಾರದಾ ಆಶ್ರಮಗಳು. ಈ ಆಶ್ರಮಗಳ ಪರಂಪರೆಯಲ್ಲಿ ಪ್ರಥಮ ಸಂನ್ಯಾಸ ಸ್ವೀಕರಿಸಿದವರು ಪೂಜ್ಯ ಸ್ವಾಮಿ ನಿರ್ಭಯಾನಂದ ಸರಸ್ವತೀ ಮಹಾರಾಜ್ ಮತ್ತು ಪೂಜ್ಯ ಸ್ವಾಮಿ ವೀರೇಶಾನಂದ ಸರಸ್ವತಿಯವರುಗಳು. ಈ ಆಶ್ರಮಗಳ ಸಂಪರ್ಕಕ್ಕೆ ಬಂದ ಯುವಕರ ಸಂಖ್ಯೆ ವರ್ಧಿಸುತ್ತ ಸಾಗಿತು. ಆಶ್ರಮಗಳೂ ಹೆಚ್ಚು ಹೆಚ್ಚು ಪ್ರಾರಂಭವಾಗುತ್ತ ಇಂದು ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲೂ ಆಶ್ರಮಗಳಿವೆ.

ಈ ಆಶ್ರಮಗಳು ಪರಸ್ಪರ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸುತ್ತಿರುವುವು. ಈ ಆಶ್ರಮಗಳ ಸಂನ್ಯಾಸಿಗಳಲ್ಲಿರುವ ಸೋದರ



ರಾಮಕೃಷ್ಣ ವಿವೇಕಾನಂದ ಆಶ್ರಮ, ಗದಗ

ಭಾವ ಅನನ್ಯವಾದುದು. ಈ ಅನನ್ಯತೆಗೆ ಕಾರಣ ಮತ್ತೆ ಅದೇ – ಸ್ವಾಮಿ ಪುರುಷೋತ್ತಮಾನಂದಜಿ.

ಈ ಆಶ್ರಮಗಳ ಕಾರ್ಯಸೂಚಿ ಒಂದೇ ರೀತಿಯದ್ದಾಗಿದೆ. ರಾಮಕೃಷ್ಣ ಮಠದ ಮತ್ತು ಮಿಷನ್ನಿನ ಇಂದಿನ ಪರಮಾಧ್ಯಕ್ಷರಾದ ಪರಮಪೂಜ್ಯ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜರವರ ಮತ್ತು ರಾಮಕೃಷ್ಣ ಮಠದ ಇನ್ನೂ ಅನೇಕ ಹಿರಿಯ ಯತಿಗಳ ಆಶೀರ್ವಾದ, ಮಾರ್ಗದರ್ಶನ ಈ ಆಶ್ರಮಗಳಿಗೆ ನಿರಂತರವಾಗಿ ಸಿಗುತ್ತಿರುವುದು ಒಂದು ಭಾಗ್ಯ ಮತ್ತು ಸ್ಮರಣೀಯ.

ರಾಮಕೃಷ್ಣ–ವಿವೇಕಾನಂದ ಆಶ್ರಮಗಳಲ್ಲಿ ನಿತ್ಯಪೂಜೆ, ಆರಾತ್ರಿಕ, ಉಷಾಕೀರ್ತನೆ, ವಾರದ ಸತ್ಸಂಗ, ಪ್ರವಚನಗಳೊಂದಿಗೆ ಹಲವಾರು ವಿಶೇಷ ಕಾರ್ಯಗಳೂ ನಡೆಯುತ್ತಿವೆ. ಆ ಎಲ್ಲ ಆಶ್ರಮಗಳ ಕಾರ್ಯಗಳು ಭಾವಾಂದೋಲನದಲ್ಲಿ ಮೈಲುಗಲ್ಲಾಗಿವೆ. ಅವುಗಳಿಂದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಬಹುದಾದ ಸ್ಮರಣೀಯ ಕಾರ್ಯಗಳು ನಡೆದಿವೆ.

### ‘ರಾಮಕೃಷ್ಣ ವಿವೇಕಾನಂದ ಆಶ್ರಮ’ಗಳ ಸಂಕ್ಷಿಪ್ತ ಪರಿಚಯ

ಶ್ರೀರಾಮಕೃಷ್ಣರ ದೇವಸ್ಥಾನಗಳನ್ನು ಮತ್ತು ಭಗವಾನ್ ಶ್ರೀರಾಮಕೃಷ್ಣರ ಅಮೃತ ಶಿಲೆಯ ಮೂರ್ತಿಯನ್ನು ಹೊಂದಿರುವ ಆಶ್ರಮಗಳು : **ತುಮಕೂರು, ಧಾರವಾಡ ಮತ್ತು ಪೊಳಲಿ**

**ಶೈಕ್ಷಣಿಕ ವಲಯದಲ್ಲಿ ಅಂದರೆ ಶಾಲೆಗಳನ್ನು, ವಸತಿ ನಿಲಯಗಳನ್ನು ನಡೆಸುತ್ತಿರುವ ಆಶ್ರಮಗಳು :**




ರಾಮಕೃಷ್ಣ ವಿವೇಕಾನಂದ ಆಶ್ರಮ, ರಾಣೆಬೆನ್ನೂರು

- ಬಿಜಾಪುರ ಜಿಲ್ಲೆಯ ಮನಗೂಳಿ ಗ್ರಾಮದಲ್ಲಿ ‘**ವಿವೇಕಾನಂದ ರೂರಲ್ ಅಕ್ಯಾಡೆಮಿ**’ ವಸತಿ ಶಾಲೆ.
- ಕಲಬುರಗಿಯ ಆಶ್ರಮದ ವತಿಯಿಂದ ತಾಡತೆಗನೂರು ಗ್ರಾಮದಲ್ಲಿ ವಸತಿ ಶಾಲೆ.
- ರಾಣೇಬೆನ್ನೂರ ಆಶ್ರಮದಲ್ಲಿ ‘**ವಿವೇಕಾನಂದ ವಿದ್ಯಾರ್ಥಿ ಮಂದಿರ**’ ಎಂಬ ವಸತಿ ನಿಲಯ.
- ಶಿರಸಿಯ ‘**ರಾಮಕೃಷ್ಣ ಸ್ಟೂಡೆಂಟ್ ಹೋಮ್**’.
- ಪೊಳಲಿಯ ರಾಮಕೃಷ್ಣ ತಪೋವನದ ವತಿಯಿಂದ ‘**ಬಾಲಕಾಶ್ರಮ**’.
- ಶಿವಮೊಗ್ಗೆಯ **ಶ್ರೀ ಶಾರದಾದೇವಿ ಅಂಧರ ವಿಕಾಸ ಕೇಂದ್ರ**.
- ಧಾರವಾಡ ಆಶ್ರಮದ ವತಿಯಿಂದ ನಡೆಯುತ್ತಿರುವ ‘**ಶ್ರೀ ಶಾರದಾ ಅಧ್ಯಯನ ಕೇಂದ್ರ**’ದಲ್ಲಿ ರಾಜ್ಯದ ಬೇರೆ ಬೇರೆ ಭಾಗದ ೨೫೦ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ.
- ಬೀದರ್ ಆಶ್ರಮದ ವತಿಯಿಂದ ೬೦ ದೇಶಿಯ ಗೋವುಗಳನ್ನೊಳಗೊಂಡ ರಾಜ್ಯದ ಅತ್ಯಂತ ಯಶಸ್ವೀ ‘ಗೋಶಾಲೆ’ ಇದೆ.
- ಬೆಂಗಳೂರಿನ ರಾಮೋಹಳ್ಳಿಯಲ್ಲಿರುವ ‘ರಾಮಕೃಷ್ಣ ಯೋಗಾಶ್ರಮ’ದ ವತಿಯಿಂದ ೨೫ ವಿದ್ಯಾರ್ಥಿಗಳನ್ನೊಳಗೊಂಡ ‘ಗುರುಕುಲ’ ಅತ್ಯಂತ ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ.
- ಬಳ್ಳಾರಿಯ ರಾಮಕೃಷ್ಣ–ವಿವೇಕಾನಂದ ಕೇಂದ್ರದಲ್ಲಿ ವಿದ್ಯಾರ್ಥಿಗಳ ವಸತಿ ನಿಲಯ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ.
- ಎಲ್ಲ ರಾಮಕೃಷ್ಣ–ವಿವೇಕಾನಂದ ಆಶ್ರಮಗಳೂ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗುತ್ತ ಸಣ್ಣ ಪ್ರಮಾಣದಲ್ಲಾದರೂ ಅವರುಗಳ ಉಚಿತ ವಸತಿ ವ್ಯವಸ್ಥೆಯನ್ನು ಮಾಡುತ್ತಿವೆ.

### ರಾಮಕೃಷ್ಣ–ವಿವೇಕಾನಂದ ಆಶ್ರಮಗಳು ಹೆಮ್ಮೆಪಡುವ ಹಲವು ಮೈಲುಗಲ್ಲುಗಳು

- ಈ ಆಶ್ರಮಗಳ ಹಿರಿಯ ಸ್ವಾಮೀಜಿಗಳಾದ ಪೂಜ್ಯ ಶ್ರೀ ಸ್ವಾಮಿ ನಿರ್ಭಯಾನಂದಜಿಯವರು, ಸ್ವಾಮಿ ವೀರೇಶಾನಂದಜೀಯವರು ಮತ್ತು ಸ್ವಾಮಿ ಯೋಗೇಶ್ವರಾನಂದಜೀಯವರು ಸ್ಪೇನಿನ ಬಾರ್ಸಿಲೋನಾದಲ್ಲಿ ನೆರವೇರಿದ ೪ನೇ ಸರ್ವಧರ್ಮ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಗಳಾಗಿ ಭಾಗವಹಿಸಿದ್ದಾರೆ, ಮತ್ತು ಸ್ವಾಮಿ ವಿವೇಕಾನಂದರ ಚಿಕಾಗೋ ಭಾಷಣ ೧೨೫ನೇ ವರ್ಷದ ಸ್ಮರಣೆಗಾಗಿ ಚಿಕಾಗೋದಲ್ಲಿ ನಡೆದ ಸಭೆಯಲ್ಲಿ ಭಾಗವಹಿಸಿದ್ದರು. ವಿದೇಶಗಳ ವಿಶ್ವವಿದ್ಯಾಲಯಗಳಲ್ಲೂ ದಿವ್ಯತ್ರಯರ ಸಂದೇಶ, ಭಾರತೀಯ ಸಂಸ್ಕೃತಿ ಪ್ರಸರಣ ಕಾರ್ಯ ನಡೆಯುತ್ತಿರುವುದು ಕರ್ನಾಟಕದ ರಾಮಕೃಷ್ಣ–ವಿವೇಕಾನಂದ ಆಶ್ರಮಗಳ ಮಟ್ಟಿಗೆ ಹೆಗ್ಗುರುತಾಗಿವೆ.
- ಕಲಬುರ್ಗಿಯ ಸಮೀಪ ತಾಡತೆಗನೂರು ಗ್ರಾಮದಲ್ಲಿರುವ ‘ಶ್ರೀ ವಿವೇಕಾನಂದ ವಿದ್ಯಾಪೀಠ’ಕ್ಕೆ ಮಾಜಿ ರಾಷ್ಟ್ರಪತಿಗಳೂ, ಭಾರತ ಕಂಡ ಶ್ರೇಷ್ಠ ವಿಜ್ಞಾನಿ, ಭಾರತರತ್ನ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಭೇಟಿ ನೀಡಿದ್ದರು. ಹಿಂದುಳಿದ ಗ್ರಾಮೀಣ ಭಾಗದಲ್ಲಿನ ಶೈಕ್ಷಣಿಕ ಸೇವೆಯನ್ನು ಶ್ಲಾಘಿಸಿದ್ದರು.

* ೨೦೧೭ರಲ್ಲಿ ತುಮಕೂರು ಆಶ್ರಮದ ರಜತ ಮಹೋತ್ಸವದ ಮುಕ್ತಾಯ ಸಮಾರಂಭದಲ್ಲಿ ಭಾರತದ ಸನ್ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ನರೇಂದ್ರ ಮೋದಿಯವರು ಆನ್‌ಲೈನ್ ಮೂಲಕ ಭಾಗವಹಿಸಿ, ಅಂದು ಸೇರಿದ ೨೫ ಸಾವಿರ ಯುವ ಜನತೆಯನ್ನುದ್ದೇಶಿಸಿ ಮಾತನಾಡಿದ್ದರು. ಪರಮಪೂಜ್ಯ ಶ್ರೀ ಸ್ವಾಮಿ ಗೌತಮಾನಂದಜಿ ಮಹಾರಾಜ್‌ರವರ ದಿವ್ಯ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನೆರವೇರಿತ್ತು.
* ೨೦೨೩ರಲ್ಲಿ ಕರ್ನಾಟಕ ರಾಜ್ಯದ ಪ್ರೌಢಶಾಲೆಯ ಒಂದು ಲಕ್ಷ ವಿದ್ಯಾರ್ಥಿಗಳಿಗೆ **'ವಿದ್ಯಾರ್ಥಿಗಾಗಿ'** ಪುಸ್ತಕವನ್ನು ವಿತರಿಸಿ ಪರೀಕ್ಷೆಗಳನ್ನು ಏರ್ಪಡಿಸಲಾಗಿತ್ತು.
* ಪ್ರತಿವರ್ಷ ಎಲ್ಲ ರಾಮಕೃಷ್ಣ-ವಿವೇಕಾನಂದ ಆಶ್ರಮಗಳು ಅಂದಾಜು ೧ ಕೋಟಿ ರೂ. ಗಳಷ್ಟು ರಾಮಕೃಷ್ಣ- ವಿವೇಕಾನಂದರ ಸಾಹಿತ್ಯವನ್ನು ಜನಮಾನಸಕ್ಕೆ ಮುಟ್ಟಿಸುವ ಕಾರ್ಯ ನೆರವೇರಿಸುತ್ತಿವೆ.
* ರಾಜ್ಯ ಮಟ್ಟದ ಭಕ್ತ ಸಮ್ಮೇಳನಗಳು ಹೊಸ ಹೊಸ ಜನರನ್ನು ದಿವ್ಯತ್ರಯರ ಸಂಪರ್ಕಕ್ಕೆ ತರುವಲ್ಲಿ ಮಹತ್ವದ ಪಾತ್ರ ವಹಿಸಿರುತ್ತವೆ.
* ರಾಮಕೃಷ್ಣ-ವಿವೇಕಾನಂದ ಆಶ್ರಮಗಳ ಸಂಪರ್ಕಕ್ಕೆ ಬಂದ ಹಲವಾರು ಉನ್ನತ ವಿದ್ಯಾಭ್ಯಾಸ ಪಡೆದ ಯುವಕರು ಇಂದು ಮಾತೃ ಸಂಸ್ಥೆಯಾದ ರಾಮಕೃಷ್ಣ ಮಿಷನ್ನಿನಲ್ಲಿ ಬ್ರಹ್ಮಚಾರಿಗಳಾಗಿ, ಸಂನ್ಯಾಸಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇದು ಅತ್ಯಂತ ಹೆಮ್ಮೆಪಡುವ ಸಂಗತಿ.

### ರಾಮಕೃಷ್ಣ-ವಿವೇಕಾನಂದ ಶಾರದಾಶ್ರಮಗಳ ಕಾರ್ಯಚಟುವಟಿಕೆಗಳ ಸಾಮಾನ್ಯ ಅಂಶಗಳು

* ಪ್ರತಿನಿತ್ಯ ಪೂಜೆ, ಆರಾತ್ರಿಕ ಭಜನೆ.
* ಪ್ರತಿವಾರದ ಪ್ರವಚನಗಳು, ಸತ್ಸಂಗಗಳು.
* ಮನೆಗಳಲ್ಲಿ , ಬಡಾವಣೆಗಳಲ್ಲಿ ವಿಶೇಷ ಸತ್ಸಂಗಗಳು.
* ಯುವ ಸಮ್ಮೇಳನಗಳು, ಶಾಲಾ ಕಾಲೇಜುಗಳಲ್ಲಿ ವ್ಯಕ್ತಿತ್ವ ವಿಕಸನ ಕಾರ್ಯಾಗಾರ ಕಾರ್ಯಕ್ರಮಗಳು.
* ಶಿಕ್ಷಕರಿಗೆ ಸಮ್ಮೇಳನ, ಕಾರ್ಯಾಗಾರಗಳು.
* 'ಜೀವಂತ ದುರ್ಗಾಪೂಜೆ' ಎಂಬ ಶೀರ್ಷಿಕೆಯಡಿಯಲ್ಲಿ ಬಡ ಮಹಿಳೆಯರಿಗೆ ವಸ್ತ್ರದಾನ, ಅನ್ನದಾನ ಕಾರ್ಯಕ್ರಮಗಳು.
* 'ವಿದ್ಯಾರ್ಥಿದೇವೋ ಭವ' ಎಂಬ ಶಿರೋನಾಮೆಯಡಿ ವಿದ್ಯಾರ್ಥಿಗಳಿಗೆ ಉಚಿತ ತರಗತಿಗಳು, ಸ್ಕಾಲರ್‌ಶಿಪ್ ಕೊಡುವುದು.

## ಕರ್ನಾಟಕದಲ್ಲಿ ರಾಮಕೃಷ್ಣ-ವಿವೇಕಾನಂದ ಆಶ್ರಮಗಳು

| ಕ್ರಮ ಸಂಖ್ಯೆ | ಆಶ್ರಮಗಳ ಹೆಸರು | ಊರು | ಮುಖ್ಯಸ್ಥರ ಹೆಸರು | ಸ್ಥಾಪನಾ ವರ್ಷ |
|---|---|---|---|---|
| ೧ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಬಾಗಲಕೋಟೆ | ಸ್ವಾಮಿ ನಿರ್ಭಯಾನಂದ ಸರಸ್ವತಿ | 2010 |
| ೨ | ರಾಮಕೃಷ್ಣ ತಪೋವನ | ಪೊಳಲಿ (ದಕ್ಷಿಣ ಕನ್ನಡ) | ಸ್ವಾಮಿ ವಿವೇಕ ಚೈತನ್ಯಾನಂದಜೀ | 2002 |
| ೩ | ಶ್ರೀರಾಮಕೃಷ್ಣ-ವಿವೇಕಾನಂದ ಸೆಂಟರ್ | ಬಳ್ಳಾರಿ | ಶ್ರೀ ಜಗನ್ನಾಥ | 1962 |
| ೪ | ರಾಮಕೃಷ್ಣ ಓಂಕಾರ ಆಶ್ರಮ | ಮಾಗಡಿ ರೋಡ, ಬೆಂಗಳೂರು | ಸ್ವಾಮಿ ಶಾಂತಾನಂದಜೀ | 2012 |
| ೫ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಕೆಂಗೇರಿ, ಬೆಂಗಳೂರು | ಸ್ವಾಮಿ ಶಾರದಾತ್ಮನಂದಜೀ | 2006 |
| ೬ | ಶ್ರೀ ರಾಮಕೃಷ್ಣ ಸೇವಾ ಟ್ರಸ್ಟ್ | ಗಿರಿನಗರ, ಬೆಂಗಳೂರು | ಶ್ರೀ ಟಿ. ನಾರಾಯಣ | 1982 |
| ೭ | ಶಾರದಾ ಸೇವಾಶ್ರಮ | ಬೆಂಗಳೂರು | ಸೋದರಿ ಚಂದ್ರಿಕಾ ಮಾತಾಜೀ | 1992 |
| ೮ | ಶ್ರೀ ಶಾರದಾ ಶಕ್ತಿ ಆಶ್ರಮ | ಮಲ್ಲತ್ತಹಳ್ಳಿ, ಬೆಂಗಳೂರು | ಸೋದರಿ ಕಾಂತಾ ಮಾತಾಜೀ | 2002 |
| ೯ | ಭವತಾರಿಣಿ ಆಶ್ರಮ | ವಿಜಯನಗರ, ಬೆಂಗಳೂರು | ಮಾತಾಜೀ ವಿವೇಕಮಯಿ | 1993 |
| ೧೦ | ಶ್ರೀ ಮಾತಾ ಶಾರದಾ ಆಶ್ರಮ | ಹೊಸಕೋಟೆ, ಬೆಂಗಳೂರು | ಮಾತಾಜೀ ಬ್ರಹ್ಮಮಯಿ | 2004 |
| ೧೧ | ವಿವೇಕ ಹಂಸ | ಬೆಂಗಳೂರು | ಶ್ರೀ ಸುರೇಶ ಮುನ್ನ | 1994 |
| ೧೨ | ಶಾರದಾದೇವಿ ಆಶ್ರಮ | ಹಾರೇಹಳ್ಳಿ, ಬೆಂಗಳೂರು | ಸೋದರಿ ಮೀರಾ | 2012 |
| ೧೩ | ವಿವೇಕಾನಂದ ಸೇವಾಶ್ರಮ | ಬಸವನಗುಡಿ, ಬೆಂಗಳೂರು | ಗೋಪಾಲಕೃಷ್ಣ | – |
| ೧೪ | ರಾಮಕೃಷ್ಣ ಯೋಗಾಶ್ರಮ | ಕೆಂಗೇರಿ, ಬೆಂಗಳೂರು | ಸ್ವಾಮಿ ಯೋಗೇಶ್ವರಾನಂದಜೀ | 2002 |
| ೧೫ | ರಾಮಕೃಷ್ಣ ವಿವೇಕಾನಂದ ವೇದಾಂತ ಆಶ್ರಮ | ಯಲಹಂಕ, ಬೆಂಗಳೂರು | ಸ್ವಾಮಿ ಅಭಯಾನಂದಜೀ | 2011 |
| ೧೬ | ಸ್ವಾಮಿ ವಿವೇಕಾನಂದ ಎಜುಕೇಶನ್ ಸೊಸೈಟಿ | ಬನಶಂಕರಿ, ಬೆಂಗಳೂರು | ಶ್ರೀ ಹೆಚ್.ವಿ.ಶಂಕರ್ | 1970 |
| ೧೭ | ವಿವೇಕಾನಂದ ಗಿರಿಜನ ಕಲ್ಯಾಣ ಕೇಂದ್ರ | ಬಿ.ಆರ್.ಹಿಲ್ಸ್, ಚಾಮರಾಜ ನಗರ | ಡಾ. ಹೆಚ್. ಸುದರ್ಶನ್ | 1981 |
| ೧೮ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಬೀದರ್ | ಸ್ವಾಮಿ ಜ್ಯೋತಿರ್ಮಯಾನಂದಜೀ | 2004 |
| ೧೯ | ರಾಮಕೃಷ್ಣ-ವಿವೇಕಾನಂದ ಆಶ್ರಮ | ವಿಜಯಪುರ | ಸ್ವಾಮಿ ನಿರ್ಭಯಾನಂದ ಸರಸ್ವತಿ | 2000 |
| ೨೦ | ಶ್ರೀ ಶಾರದಾಶ್ರಮ | ಚಳ್ಳಕೆರೆ | ಮಾತಾಜೀ ತ್ಯಾಗಮಯೀ | 2009 |

| | | | | |
|---|---|---|---|---|
| ೨೧ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಚಿಕ್ಕಬಳ್ಳಾಪುರ | ಸ್ವಾಮಿ ಪೂರ್ಣಾನಂದಪುರಿ | 2012 |
| ೨೨ | ಶಾರದಾ ರಾಮಕೃಷ್ಣ ಆಶ್ರಮ | ಚಿತ್ರದುರ್ಗ | ಸ್ವಾಮಿ ಬ್ರಹ್ಮನಿಷ್ಠಾನಂದ ಸರಸ್ವತಿ | 2004 |
| ೨೩ | ಶ್ರೀ ರಾಮಕೃಷ್ಣ-ವಿವೇಕಾನಂದ ಆಶ್ರಮ | ಹರಿಹರ | ಸ್ವಾಮಿ ಶಾರದೇಶಾನಂದಜೀ | 2010 |
| ೨೪ | ಸಾಧನಾಶ್ರಮ | ದಾವಣಗೆರೆ | ಮಾತಾಜೀ ಯೋಗಾನಂದಮಯಿ | 2007 |
| ೨೫ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಧಾರವಾಡ | ಸ್ವಾಮಿ ವಿಜಯಾನಂದ ಸರಸ್ವತಿ | 1993 |
| ೨೬ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಗದಗ | ಸ್ವಾಮಿ ನಿರ್ಭಯಾನಂದ ಸರಸ್ವತಿ | 2002 |
| ೨೭ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಕಲಬುರಗಿ | ಸ್ವಾಮಿ ಮಹೇಶ್ವರಾನಂದಜೀ | 2001 |
| ೨೮ | ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ | ಸರಗೂರು, ತಾ. ಹೆಚ್.ಡಿ.ಕೋಟೆ, ಮೈಸೂರು | ಡಾ. ಎಮ್.ಎ.ಬಾಲಸುಬ್ರಹ್ಮಣ್ಯಂ | 1984 |
| ೨೯ | ಶ್ರೀ ಶಾರದಾಶ್ರಮ | ಹಿರಿಯೂರು | ಮಾತಾಜೀ ಚೈತನ್ಯಮಯಿ | 2006 |
| ೩೦ | ರಾಮಕೃಷ್ಣ ಗೀತಾಶ್ರಮ | ಬಳ್ಳಾರಿ ರೋಡ್, ಹೊಸಪೇಟೆ | ಸ್ವಾಮಿ ಸುಮೇಧಾನಂದಜೀ | 2012 |
| ೩೧ | ಶ್ರೀ ಮಾತಾ ಆಶ್ರಮ | ಗೋಕುಲ ರೋಡ್, ಹುಬ್ಬಳ್ಳಿ | ಮಾತಾಜೀ ತೇಜೋಮಯಿ | 2004 |
| ೩೨ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಕಲ್ಯಾಣ ನಗರ, ಹುಬ್ಬಳ್ಳಿ | ಸ್ವಾಮಿ ರಘುವೀರಾನಂದಜೀ | 2003 |
| ೩೩ | ಶ್ರೀ ರಾಮಕೃಷ್ಣ ಆಶ್ರಮ | ಕೊಳ್ಳೇಗಾಲ | ಎ.ಡಿ.ಶಿವಪ್ರಕಾಶ | – |
| ೩೪ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಕಲ್ಲಗಂಗೂರು, ಶಿವಮೊಗ್ಗ | ಸ್ವಾಮಿ ವಿನಯಾನಂದ ಸರಸ್ವತಿ | 2005 |
| ೩೫ | ಶ್ರೀ ರಾಮಕೃಷ್ಣ ಸೇವಾ ಸಂಘ | ರಾಮಕೃಷ್ಣ ನಗರ, ಮೈಸೂರು | ಶ್ರೀ ಪಾಪೇಗೌಡ ಎಮ್. | 1988 |
| ೩೬ | ರಾಮಕೃಷ್ಣ-ವಿವೇಕಾನಂದ ಆಶ್ರಮ | ರಾಯಚೂರು | ಸ್ವಾಮಿ ನಿರ್ಭಯಾನಂದ ಸರಸ್ವತಿ | 2002 |
| ೩೭ | ರಾಮಕೃಷ್ಣ-ವಿವೇಕಾನಂದ ಆಶ್ರಮ | ರಾಣೇಬೆನ್ನೂರು | ಸ್ವಾಮಿ ಪ್ರಕಾಶಾನಂದಜೀ | 2005 |
| ೩೮ | ರಾಮಕೃಷ್ಣ-ವಿವೇಕಾನಂದ ಆಶ್ರಮ | ತುಮಕೂರು | ಸ್ವಾಮಿ ವೀರೇಶಾನಂದ ಸರಸ್ವತಿ | 1992 |
| ೩೯ | ಶ್ರೀಶಾರದಾದೇವಿ ಅಂಧರ ವಿಕಾಸ ಕೇಂದ್ರ | ಪರಮಹಂಸ ನಗರ, ಶಿವಮೊಗ್ಗ | ಶ್ರೀ ಎಚ್.ವಿ.ಸುಬ್ರಹ್ಮಣ್ಯ | 1986 |
| ೪೦ | ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್ ಹೋಮ್ | ಶಿರಸಿ | ಮುರಾರಿ ಭಟ್ | 2012 |
| ೪೧ | ಶ್ರೀ ರಾಮಕೃಷ್ಣ ಆಶ್ರಮ ಆಂಡ್ ಫ್ರೀ ಹೋಮ್ ಡಿಸ್ಪೆನ್ಸರಿ ಟ್ರಸ್ಟ್ | ತಗ್ಗಿಹಳ್ಳಿ, ದೊಡ್ಡಹೊಸಳ್ಳಿ ಪೋ. ಮಧುಗಿರಿ ತಾ. | ಸ್ವಾಮಿ ರಾಮಾನಂದಜೀ | 1976 |
| ೪೨ | ಶಾರದಾ ಶಕ್ತಿ ಪೀಠ | ಗೋಕಾಕ | ಮಾತಾ ಶಿವಾಮಯಿ | 2019 |
| ೪೩ | ಹಂಸಾಂಭಾ ಆಶ್ರಮ | ಸಂಡೂರು ರೋಡ್, ಹೊಸಪೇಟೆ | ಮಾತಾ ಪ್ರಬೋಧಾಮಯಿ | 2019 |
| ೪೪ | ಶ್ರೀ ಶಾರದಾ ವಿಶ್ವ ಭಾವೈಕ್ಯ ಆಶ್ರಮ | ಕಿರಗೂರು, ಕೆ.ಶೆಟ್ಟಿಹಳ್ಳಿ, ಮಂಡ್ಯ | ಮಾತಾ ಅಮೋಘಾಮಯಿ | 2017 |
| ೪೫ | ಕೃಪಾಮಯಿ ಶಾರದಾಶ್ರಮ | ಸಿಂದಗಿ ರೋಡ್, ವಿಜಯಪುರ | ಮಾತಾ ಕೈವಲ್ಯಮಯಿ | 2006 |
| ೪೬ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಮಧುಗಿರಿ | ಸ್ವಾಮಿ ನಿರ್ಮಲಾನಂದಜೀ | 1994 |
| ೪೭ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಶ್ರೀರಂಗಪಟ್ಟಣ | ಸ್ವಾಮಿ ಗದಾಧರಾನಂದಜೀ | 2014 |
| ೪೮ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಮಂಡ್ಯ | ಸ್ವಾಮಿ ನಿರ್ಮಲಾನಂದಜೀ | 2015 |
| ೪೯ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಸಾಗರ | ಸ್ವಾಮಿ ಜ್ಞಾನಾನಂದಜೀ | 2015 |
| ೫೦ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಜಮಖಂಡಿ | ಸ್ವಾಮಿ ಗಿರಿಜೇಶಾನಂದಜೀ | 2018 |
| ೫೧ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಸಿಂಧನೂರು | ಸ್ವಾಮಿ ಸದಾನಂದಜೀ | 2021 |
| ೫೨ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಕುದೂರು (ರಾಮನಗರ ಜಿಲ್ಲೆ) | ಸ್ವಾಮಿ ಪರಮಾನಂದಜೀ | 2015 |
| ೫೩ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಹಾಸನ | ಸ್ವಾಮಿ ಪ್ರೇಮರೂಪಾನಂದಜೀ | 2024 |
| ೫೪ | ಸಾಧನಾಶ್ರಮ | ಕನಕಪುರ | ಮಾತಾಜೀ ಜ್ಯೋತ್ಸ್ನಾಮಯಿ | 2024 |
| ೫೫ | ವಿವೇಕಾನಂದ ಸೇವಾ ಕೇಂದ್ರ | ಮನಗೂಳಿ (ಬಿಜಾಪುರ ಜಿಲ್ಲೆ) | ಸ್ವಾಮಿ ನಿರ್ಭಯಾನಂದಜೀ | 1986 |
| ೫೬ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಯಾದಗಿರಿ | ಸ್ವಾಮಿ ನಿರ್ಭಯಾನಂದಜೀ | 2015 |
| ೫೭ | ರಾಮಕೃಷ್ಣ-ವಿವೇಕಾನಂದ ಆಶ್ರಮ | ಕೊಪ್ಪಳ | ಸ್ವಾಮಿ ಚೈತನ್ಯಾನಂದಜೀ | 2009 |
| ೫೮ | ಶ್ರೀ ರಾಮಕೃಷ್ಣ ಆಶ್ರಮ | ಕಾರವಾರ | ಸ್ವಾಮಿ ಭವೇಶಾನಂದಜೀ | 1952 |